# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1756** |
| ಸದಸ್ಯರ ಹೆಸರು | : | ಶ್ರೀ ಟಿ.ಎನ್.ಜವರಾಯಿಗೌಡ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 23-03-2026 |
| ಉತ್ತರಿಸುವ ಸಚಿವರು | | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬೇಸಿಗೆ ಆರಂಭವಾಗಿರುವ ಮುಂಚೆಯೇ ವಿದ್ಯುತ್ ಬಳಕೆ ಪ್ರಮಾಣವು ಗಣನೀಯವಾಗಿ ಏರಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕಳೆದ ವರ್ಷ ಮಾರ್ಚ್-2025 ರಿಂದ ಮೇ-2025 ವರೆಗಿನ ಅವಧಿಯಲ್ಲಿ ರಾಜ್ಯವು ಮಾರ್ಚ್ 07-03-2025 ರಂದು 18,395 MW ಗರಿಷ್ಠ ಬೇಡಿಕೆಯನ್ನು ಪೂರೈಸಿದೆ ಮತ್ತು ಈ ವರ್ಷವು ಗರಿಷ್ಠ ಬೇಡಿಕೆ ಸುಮಾರು 19,000 MW ತಲುಪುವ ನಿರೀಕ್ಷೆಯಿದೆ.<br><br>ರಾಜ್ಯದಲ್ಲಿ ಉತ್ಪಾದನೆ ಘಟಕಗಳಿಂದ ಉತ್ಪಾದನೆಯಾಗುವ ನಿಗದಿತ ಶಕ್ತಿಯು ಕಡಿಮೆಯಾದಲ್ಲಿ ಬ್ಯಾಂಕಿಂಗ್ ಸಿಸ್ಟಮ್ ನಲ್ಲಿ / ಮುಕ್ತ ಮಾರುಕಟ್ಟೆಯಲ್ಲಿ ವಿದ್ಯುತ್‌ನ್ನು ಪಡೆದು ಬೇಡಿಕೆಯನ್ನು ಪೂರೈಸಲಾಗುತ್ತಿದೆ.<br><br>ರಾಜ್ಯದಲ್ಲಿ ಪ್ರಸ್ತುತ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಪೂರೈಸಲಾಗುತ್ತಿದೆ. |
| ಆ) | ಬಂದಿದ್ದಲ್ಲಿ, ಬೇಸಿಗೆಯ ದಿನಗಳಲ್ಲಿ ಎಷ್ಟು ಮೆಗಾವ್ಯಾಟ್ ವಿದ್ಯುತ್ ಅಗತ್ಯವಿದೆ: ಈ ವಿದ್ಯುತ್ ಅನ್ನು ಪೂರೈಕೆ ಮಾಡಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು: (ವಿವರ ನೀಡುವುದು) | |
| ಇ) | ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಹಾಗೂ ಬಳಕೆಗೆ ತಕ್ಕಂತೆ ವಾರ್ಷಿಕ ಉತ್ಪಾದನೆಯ ಪ್ರಮಾಣವೆಷ್ಟು: (ವಿವರ ನೀಡುವುದು) | ರಾಜ್ಯದಲ್ಲಿ 2025-26 ನೇ ಸಾಲಿನಲ್ಲಿ (ಏಪ್ರಿಲ್ -25 ರಿಂದ ಜನವರಿ -26 ರವರೆಗೆ) ವಿವಿಧ ಮೂಲಗಳಿಂದ ಲಭ್ಯವಾದ ವಿದ್ಯುತ್ ಪ್ರಮಾಣದ ವಿವರಗಳು ಈ ಕೆಳಕಂಡಂತಿವೆ: |
| ಈ) | ಜಲ ವಿದ್ಯುತ್ ಸ್ಥಾವರಗಳು, ಪವನ ಶಕ್ತಿ, ಉಷ್ಣ ವಿದ್ಯುತ್ ಸ್ಥಾವರಗಳು ಹಾಗೂ ಸೌರ ಶಕ್ತಿ ಸೇರಿದಂತೆ ಈ ಎಲ್ಲಾ ಮೂಲಗಳಿಂದ ಎಷ್ಟು ಪ್ರಮಾಣದ ವಿದ್ಯುತ್ ಉತ್ಪಾದನೆ ಆಗುತ್ತಿದೆ: (ವಿವರ ನೀಡುವುದು) | (see table below) |

| ಕ್ರ ಸಂ | ವಿದ್ಯುತ್ತಿನ ಮೂಲಗಳು | ವಿದ್ಯುತ್ ಲಭ್ಯತೆ 2025-26 (ಏಪ್ರಿಲ್ -25 ರಿಂದ ಜನವರಿ -26 ರವರೆಗೆ) ಮಿ.ಯೂ ಗಳಲ್ಲಿ (ತಾತ್ಕಾಲಿಕ) |
|---|---|---|
| 1 | ಜಲ ವಿದ್ಯುತ್ | 13168.316 |
| 2 | ಶಾಖೋತ್ಪನ್ನ (ಉಷ್ಣ ವಿದ್ಯುತ್) | 15650.417 |
| 3 | ಪವನ ವಿದ್ಯುತ್ | 9722.884 |
| 4 | ಸೌರ ವಿದ್ಯುತ್ | 9556.583 |
| 5 | ಕೇಂದ್ರ ಸರ್ಕಾರ ಸ್ವಾಮ್ಯದ ವಿದ್ಯುತ್ ಉತ್ಪಾದನಾ ಘಟಕಗಳಿಂದ ರಾಜ್ಯದ ಪಾಲು | 22067.189 |
| 6 | ಇತರೆ ಮೂಲಗಳಿಂದ: | |
| | ಕ್ಯಾಪ್ಟಿವ್ | 583.827 |
| | ಹೈಡಲ್(ಕೆಪಿಸಿಎಲ್) | 83.774 |
| | ಮಿನಿ ಹೈಡಲ್ | 2557.178 |
| | ಕೋ- ಜನರೇಷನ್ | 1644.925 |
| | ಬಯೋಮಾಸ್ | 39.097 |
| | ಹೈಬ್ರಿಡ್ Wind+solar) | 2022.922 |

<table>
<tr><td></td><td></td><td>

| | | |
|---|---|---|
| 7 | ವೈಸಿಸಿಪಿ (Yelahanka Combined Cycle Power Plant) | 509.678 |
| 8 | ಬಿಡದಿ (ವೇಸ್ಟ್ to ಎನರ್ಜಿ) (WTE) | 48.283 |
| 9 | ಬೃಹತ್ ಐ.ಪಿ.ಪಿ. | 3848.375 |
| 10 | ಜಿಂದಾಲ್ | 254.891 |
| **11** | **ಒಟ್ಟು** | **81758.34** |

</td></tr>
<tr><td>ಉ</td><td>ಒಟ್ಟಾರೆಯಾಗಿ ಯಾವುದೇ ತೊಂದರೆಯಿಲ್ಲದೆ, ರೈತರ ಕೃಷಿ ಪಂಪ್‌ಸೆಟ್‌ಗಳಿಗೆ, ಕುಡಿಯುವ ನೀರಿಗಾಗಿ, ಕೈಗಾರಿಕೆಗಳಿಗೆ, ಪರೀಕ್ಷೆ ಸಮಯವಾದ್ದರಿಂದ ವಸತಿ ಪ್ರದೇಶಕ್ಕೆ ನಿರಂತರವಾಗಿ ವಿದ್ಯುತ್ ಒದಗಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ? (ವಿವರ ನೀಡುವುದು)</td><td>

ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಪ್ರಸ್ತುತ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ, ಕುಡಿಯುವ ನೀರಿನ ಸ್ಥಾವರಗಳಿಗೆ, ಕೈಗಾರಿಕೆಗಳಿಗೆ, ಕೆಳಕಂಡಂತೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

- ನಗರ ಮತ್ತು ಕೈಗಾರಿಕಾ ಫೀಡರ್ ಗಳು: 24:00 ಗಂಟೆಗಳು
- ನಿರಂತರ ಜ್ಯೋತಿ ಫೀಡರ್ ಗಳು : 23:00 ರಿಂದ 24:00 ಗಂಟೆಗಳು
- ನೀರು ಸರಬರಾಜು ಫೀಡರ್ ಗಳು : 24:00 ಗಂಟೆಗಳು
- ಕೃಷಿ ಫೀಡರ್ ಗಳು : 7 :00 ಗಂಟೆಗಳ 3 ಫೇಸ್

ಬೇಸಿಗೆಯಲ್ಲಿ ಯಾವುದೇ ಸಮಸ್ಯೆಯಾಗದಂತೆ ನಿರಂತರ ವಿದ್ಯುತ್ ಸರಬರಾಜಿಗಾಗಿ ವಿದ್ಯುತ್ ಅಡಚಣೆ ಆಗದಂತೆ ನಿಯಮಿತವಾಗಿ ಎಲ್ಲಾ ವಿದ್ಯುತ್ ಉಪಕೇಂದ್ರ ಗಳ ಹಾಗೂ 11 ಕೆವಿ ವಿದ್ಯುತ್ ಮಾರ್ಗಗಳ ನಿರ್ವಹಣೆ ಕಾರ್ಯ ಮಾಡಲಾಗುತ್ತಿದೆ.

ಮುಂದುವರೆದು, ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆಯನ್ನು ನೀಗಿಸಲು ಎಸ್ಕಾಂಗಳ ಪರವಾಗಿ, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ (ಪಿ.ಸಿ.ಕೆ.ಎಲ್) ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. **<u>ಬ್ಯಾಂಕಿಂಗ್ ವ್ಯವಸ್ಥೆಗಳು:</u>**

**a) <u>ಉತ್ತರ ಪ್ರದೇಶ (UPPCL):</u>**

➢ ಈಗಾಗಲೇ ಹಿಂದಿನ ಮಳೆಗಾಲದಲ್ಲಿ ಲಭ್ಯವಿದ್ದ ಹೆಚ್ಚುವರಿ ವಿದ್ಯುತ್ತನ್ನು

ದಿನಾಂಕ 03.10.2025 ರಿಂದ 18.10.2025 ವರೆಗೆ ಸುಮಾರು 100-300 ಮೆ.ವ್ಯಾ. (17.6 ಎಂ.ಯು, 19:00 to 24:00 Hrs) ನೀಡಿದ್ದು,

ದಿನಾಂಕ 01.03.2026 ರಿಂದ 31.03.2026 ವರೆಗೆ 118.09 ಮೆ.ವ್ಯಾ. ವಿದ್ಯುತ್ 5 ಘಂಟೆಗಳ ಕಾಲ (@104%, 18.30 MU, 19:00 to 24:00 Hrs) ಪಡೆಯಲಾಗುತ್ತಿದೆ.

➢ 100 ರಿಂದ 1300 ಮೆ.ವ್ಯಾ ರಷ್ಟು (morning & evening peak hours) ವಿದ್ಯುತ್ತನ್ನು ದಿನಾಂಕ 03.11.2025 ರಿಂದ 15.05.2026 ರವರೆಗೆ ವಿದ್ಯುತ್ ಪಡೆಯಲಾಗುತ್ತಿದೆ.

**b) <u>ಪಂಜಾಬ್ (PSPCL):</u>**

➢ ಈಗಾಗಲೇ ಹಿಂದಿನ ಮಳೆಗಾಲದಲ್ಲಿ ಲಭ್ಯವಿದ್ದ ಹೆಚ್ಚುವರಿ ವಿದ್ಯುತ್ತನ್ನು

ದಿನಾಂಕ 14.06.2025 ರಿಂದ 30.09.2025 ವರೆಗೆ ಸುಮಾರು 200-450 ಮೆ.ವ್ಯಾ. (856.64 ಎಂ.ಯು, RTC) ನೀಡಿದ್ದು,

ದಿನಾಂಕ 01.11.2025 ರಿಂದ 15.04.2026 ವರೆಗೆ 50 ರಿಂದ 445 ಮೆ.ವ್ಯಾ. (@105%, 899.47 MU, RTC) ಪಡೆಯಲಾಗುತ್ತಿದೆ.

</td></tr>
</table>

| | | |
|---|---|---|
| | | ➢ 100 ರಿಂದ 300 ಮೆ.ವ್ಯಾ (RTC) ರಷ್ಟು ವಿದ್ಯುತ್ತನ್ನು ದಿನಾಂಕ 01.01.2026 ರಿಂದ 10.04.2026 ರವರೆಗೆ ಪಡೆಯಲಾಗುತ್ತಿದೆ.<br>**c) ಹರಿಯಾಣ (HPPC):**<br>➢ ರಾಜ್ಯವು 01.01.2026 ರಿಂದ 15.04.2026 ರವರೆಗಿನ ಅವಧಿಗೆ 100 MW ರಿಂದ 400 MW (RTC) ವರೆಗೆ HPPC ಯೊಂದಿಗೆ ಬ್ಯಾಂಕಿಂಗ್ ಒಪ್ಪಂದವನ್ನು ಮಾಡಿಕೊಂಡಿದೆ.<br>**2. <u>ವಿದ್ಯುತ್ ಮಾರುಕಟ್ಟೆ ಬಳಕೆ:</u>**<br>➢ 24.12.2025 ರಿಂದ 31.03.2026 ಮತ್ತು 16.04.2026 ರಿಂದ 30.04.2026 ರವರೆಗೆ 300 ರಿಂದ 700 MW RTC ವರೆಗಿನ ವಿದ್ಯುತ್ತನ್ನು ಮುಂಜಾಗ್ರುತಕ್ರಮವಾಗಿ ವಿದ್ಯುತ್ ವಿನಿಮಯ ಕೇಂದ್ರಗಳಿಂದ ಖರೀದಿಸಲಾಗಿದೆ.<br>➢ ಯಾವುದೇ ಅನಿರೀಕ್ಷಿತ ಉತ್ಪಾದನಾ ನಿಲುಗಡೆಗಳು ಅಥವಾ ಬೇಡಿಕೆಯಲ್ಲಿ ಅನಿರೀಕ್ಷಿತ ಏರಿಕೆಗಳನ್ನು ನಿರ್ವಹಿಸಲು ವಿದ್ಯುತ್ ವಿನಿಮಯ ಕೇಂದ್ರದಿಂದ ಅವಶ್ಯಕತೆಗನುಗುಣವಾಗಿ ವಿದ್ಯುತ್ತನ್ನು ಖರೀದಿಸಲಾಗುತ್ತಿದೆ.<br>**3. <u>ಶಕ್ತಿ ಯೋಜನೆ:</u>**<br>ಶಕ್ತಿಯೋಜನೆ ಅಡಿಯಲ್ಲಿ ಖರೀದಿಸಿಲಾದ 1000 MW RTC ವಿದ್ಯುತ್ತನ್ನು, ದಿನಾಂಕ 01.04.2026 ರಿಂದ ಪಡೆಯಲಾಗುವುದು. |

ಸಂಖ್ಯೆ: ಎನರ್ಜಿ 91 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು